
**"ತೆರಿಗೆ" ನೋವು...!!**




**ಆಕೆ:** ಇತ್ತೀಚೆಗೆ ಟೀವಿಯಲ್ಲಿ ಬರುತ್ತಿರುವ ಧಾರಾವಾಹಿಗಳನ್ನು ನೋಡುತ್ತೀರಾ?
**ಈಕೆ:** ಇಲ್ಲ ನನಗೆ ನಿಜ ಜೀವನದಲ್ಲೇ ಹೆಚ್ಚಿನ ಆಸಕ್ತಿ.
**ಆಕೆ:** ಹೌದಾ, ಹಾಗಾದರೆ ಅದು ಯಾವ ಚಾನಲ್‌ನಲ್ಲಿ ಬರುತ್ತಾ ಇದೆ.

**ಡಾಕ್ಟರ್:** ನಿಮ್ಮ ರೋಗ ಗುಣಪಡಿಸಿದರೆ ನನಗೆ ಏನು ಕೊಡುತ್ತೀರಿ?
**ರೋಗಿ:** ಸ್ವಾಮಿ ನಾನು ಬಡವ, ಸ್ಮಶಾನದಲ್ಲಿ ಹೆಣಕ್ಕೆ ಗುಂಡಿ ತೋಡುವವನು. ನಿಮಗೆ ಬೇಕಾದರೆ ಉಚಿತವಾಗಿ ಒಂದು ಗುಂಡಿ ತೋಡಿ ಕೊಡುತ್ತೇನೆ.

**ಕಾವಲುಗಾರ:** ಅಮ್ಮಾ, ಈಗ ಸಂಪಾದಕರನ್ನು ನೋಡುವುದಕ್ಕಾಗುವುದಿಲ್ಲ.
**ಆಕೆ:** ಮಿಸ್ಟರ್, ನಾನು ಅವರ ಹೆಂಡತಿ.
**ಕಾವಲುಗಾರ:** ಈಗ ಸ್ವಲ್ಪ ಹೊತ್ತಿನಲ್ಲಿ ಹೋದ ಹೆಂಗಸು ಕೂಡ ತಾನು ಅವರ ಹೆಂಡತಿ ಎಂದು ಒಳಗೆ ಹೋಗಿದ್ದಾಳೆ.

**ಪತ್ನಿ:** ರೀ, ನೀವು ಲೆಕ್ಚರರ್ ಆಗುವ ಬದಲು ಗಾರೆ ಮೇಸ್ತ್ರಿ ಆಗಿದ್ದರೆ ಚೆನ್ನಾಗಿರುತ್ತಿತ್ತು.
**ಪತಿ:** ಯಾಕೆ ಹೀಗೆ ಹೇಳ್ತಾ ಇದ್ದೀಯಾ?
**ಪತ್ನಿ:** ಇನ್ನೇನ್ರೀ, ಇವತ್ತು ಪೇಪರ್ ಓದಿಲ್ಲವೇ, ಗಾರೆ ಮೇಸ್ತ್ರಿಯೊಬ್ಬ ದೊಡ್ಡ ಉದ್ಯಮಿ ಎನಿಸಿಕೊಂಡಿದ್ದಾನಂತೆ.

**ರಾಮಸ್ವಾಮಿ:** ನೀವೇನೋ ವ್ಯಾಪಾರವಾಗಲಿ ಅಂತ ಈ ಪ್ಯಾರಾಚೂಟ್ ಕೊಟ್ಟಿದ್ದೀರಿ ಸರಿ, ಒಂದು ವೇಳೆ ಅದು ಸರಿಯಾಗಿ ಬಿಚ್ಚಿಕೊಳ್ಳದಿದ್ದರೆ?
**ವ್ಯಾಪಾರಿ:** ಹೆದರಬೇಡಿ ಸ್ವಾಮಿ, ಆಗ ನಿಮ್ಮ ಹಣವನ್ನು ವಾಪಸ್ಸು ಕೊಡುತ್ತೇವೆ.

**ಅತ್ತೆ:** ಇವತ್ತೇನಮ್ಮ ಎಂದೂ ಇಲ್ಲದ ಆಶ್ಚರ್ಯಕೆ? ನನ್ ಮುಂದೆ ಹಾಲು ತಂದಿಟ್ಟಿದ್ದೀಯಾ?
**ಸೊಸೆ:** ಅಂತಹದ್ದೇನಿಲ್ಲ ಅತ್ತೆ, ಇವತ್ತು ನಾಗರಪಂಚಮಿ. ಹೊರಗೆ ಹೋಗಿ ಹಾಲೆರೆಯುವ ಬದಲು ನಿಮಗೆ ತಂದುಕೊಟ್ಟೆ ಅಷ್ಟೇ.

**ಆತ:** ನಿನ್ನ ಹೆಂಡತಿ ಈಗಲಾದರೂ ಜಗಳ ಆಡುವುದನ್ನು ನಿಲ್ಲಿಸಿರುವಳೇ?
**ಈತ:** ಈಗ ಜಗಳವೇ ಇಲ್ಲ.
**ಆತ:** ಅದು ಹೇಗೆ ಸಾಧ್ಯವಾಯಿತು?
**ಈತ:** ಅವಳು ಸತ್ತು ಆರು ತಿಂಗಳಾಯಿತು.

**ಚಂದು:** ಆನಂದ ನಾನು ನನ್ನ ಹೆಂಡತಿಯಿಂದ ಡೈವೋರ್ಸ್ ಪಡೆದೆ ಕಣೋ.
**ಆನಂದ:** ಇದನ್ನು ಬಹಳ ಖುಷಿಯಿಂದ ಹೇಳ್ತಾ ಇದ್ದೀಯಲ್ವೊ?
**ಚಂದು:** ಹೌದು ಕಣೋ, ಇನ್ಮೇಲೆ ನನಗೂ ನನ್ನ ಸಂಬಳದ ಅರ್ಧ ಭಾಗ ಸಿಗುತ್ತಲ್ಲ, ಅದಕ್ಕೆ.

**ನಿರ್ದೇಶಕ:** ನೋಡಿ, ನೀವು ಈ ದೃಶ್ಯದಲ್ಲಿ ಹೆಂಡತಿಗೆ ಗುಲಾಮನಂತೆ ನಟಿಸಬೇಕು.
**ನಟ:** ಸರ್, ಇದಂತೂ ನನ್ನ ಕೈಯಲ್ಲಿ ಸಾಧ್ಯವಿಲ್ಲ?
**ನಟಿ:** ಸರ್ ಇವರ ಕೈಯಲ್ಲಿ ಆಗದಿದ್ದರೆ, ಇದನ್ನು ನನ್ನ ಪತಿ ಚೆನ್ನಾಗಿ ನಟಿಸುತ್ತಾರೆ, ಅವರನ್ನು ಕರೆಸಲಾ?

**ಯುವತಿ:** ಬಹಳ ಹೊತ್ತಿನಿಂದ ನೋಡ್ತಾ ಇದ್ದೇನೆ, ಒಂದೇ ಒಂದು ಪ್ರೀತಿ ಮಾತಾಡ್ತಾ ಆಡ್ತಿದ್ದೀಯಾ?
**ಯುವಕ:** ಅಲ್ಲಿ ನೋಡು, ಅಲ್ಲಿ ಹೋಗುತ್ತಿರುವ ಹುಡುಗಿ ಎಷ್ಟು ಚೆನ್ನಾಗಿದ್ದಾಳೆ. ಅಪ್ಸರೆಯಂತೆ ಕಾಣುತ್ತಿದ್ದಾಳೆ, ದೈವ ಸೃಷ್ಟಿ ಎಷ್ಟು ಸುಂದರ.

**ಆತ:** ಈ ದೇಶದಲ್ಲಿ ಸಾವಿನ ಪ್ರಮಾಣ ಹೇಗೆ?
**ಈತ:** ನೂರಕ್ಕೆ ನೂರರಷ್ಟು.
**ಆತ:** ಅದು ಹೇಗೆ?
**ಈತ:** ಹುಟ್ಟಿದವರೆಲ್ಲ ಒಂದಲ್ಲ ಒಂದು ದಿನ ಸಾಯುತ್ತಾರಲ್ಲ.

**ಗೀತಾ:** ಸ್ಮಿತಾ, ನಿನ್ನವರು ಕವಿಗಳಾದರೂ ಪಕ್ಷಪಾತಿಗಳಂತೆ ನಿಜವೇ?
**ಸ್ಮಿತಾ:** ಹೌದು, ನನ್ನವರು ಬೇರೆ ಹೆಣ್ಣುಗಳ ಸೌಂದರ್ಯವನ್ನು ಹಾಡಿ ಹೊಗಳಿ ಬರೆಯುತ್ತಾರೆ. ಆದರೆ ನನ್ನ ಸೌಂದರ್ಯವನ್ನು ಒಂದು ದಿನವೂ ಹಾಡಿ ಹೊಗಳುವುದೇ ಇಲ್ಲ.

**ನಾಣಿ:** ಗಿರಿ ಆ ಸಿನಿಮಾ ನಟಿ ನಳಿನಿಯನ್ನು ಮದುವೆಯಾದ ಮೇಲೆ ಬಹಳಷ್ಟು ಪ್ರೇಮಕಥೆಗಳನ್ನು ಬರೆದೆಯಲ್ಲ. ಅದು ಹೇಗೆ ಸಾಧ್ಯವಾಯಿತು?
**ಗಿರಿ:** ನನಗೆ ಆಕೆಯ ಹಳೆಯ ಡೈರಿ ಸಿಕ್ಕು, ಅದನ್ನು ಓದಿದ ಮೇಲೆ ಪ್ರೇಮಕಥೆಗಳು ತಂತಾನೆ ಹೊರಬಂದವು.

**ಪಿಯುಸಿ ಫಲಿತಾಂಶ....ಬಾಲಕಿಯರೇ ಮೇಲುಗೈ..!!**




**ನಾಣಿ:** ಸಾರ್, ನೀವು ವಾದಿ, ಪ್ರತಿವಾದಿ ಇಬ್ಬರೂ ಹೇಳುವ ಮಾತುಗಳನ್ನೂ ಸರಿ ಎನ್ನುತ್ತೀರಲ್ಲ ಇದು ಸರಿಯೇ?
**ನ್ಯಾಯಾಧೀಶ:** ಈಗ ನೀವು ಹೇಳುತ್ತಿರುವುದೂ ಸರಿ.

ಸಂಗ್ರಹ: **ಶಂಕರೇಗೌಡ ತುಂಬಕೆರೆ, ಮಂಡ್ಯ**